

# ಮಾಡಬೇಕಾದ ಕೆಲಸ ಮುಗಿಸಿಯೇ ಹೊರಟ ಗೀತಕ್ಕ...

ಕಲ್ಬುರ್ಗಿ ಜಿಲ್ಲೆಯ ಸಾವಳಗಿ ಎಂಬ ಪುಟ್ಟ ಹಳ್ಳಿಯಲ್ಲಿ ಜನಿಸಿದ ಗೀತಾ ನಾಗಭೂಷಣ (25 ಮಾರ್ಚ್ 1942 – 28 ಜೂನ್ 2020) ತಮ್ಮ ಕೃತಿಗಳ ಮೂಲಕ ಮೂಡಿಸಿದ ಮಹಿಳಾಧ್ವನಿ ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿ ಮಹತ್ವವಾದುದು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ 'ಬದುಕು' ಕಾದಂಬರಿ ಸೇರಿದಂತೆ ಅವರ ಕೃತಿಗಳು ಕಟ್ಟಿಕೊಡುವ ಮಹಿಳೆಯರ ಚಿತ್ರಗಳು ಹಾಗೂ ಅವರು ಎತ್ತುವ ಪ್ರಶ್ನೆಗಳು ಪಿತೃಸಂಸ್ಕೃತಿಯ ಪಾಲಿಗೆ ಸುಲಭವಾಗಿ ಉತ್ತರಿಸಲಾಗದ ಸುಡುಕೆಂಡಗಳು.

■ ಎಂ.ಎಸ್. ಆಶಾದೇವಿ

**2010**ರ ಸೆಪ್ಟೆಂಬರ್ ತಿಂಗಳಿನಲ್ಲಿ ಗೀತಾ ಅವರನ್ನು ನಾನು ಮೊದಲ ಬಾರಿಗೆ ಭೇಟಿಯಾಗಿದ್ದು. ಮಿತ್ರರಾದ ವಿಕ್ರಂ ವಿಸಾಜಿಯವರು ಕರೆದುಕೊಂಡು ಹೋದದ್ದು. ಮಧ್ಯಾಹ್ನದ ಮೌನದಲ್ಲಿ, ಅಷ್ಟೇನೂ ಬೆಳಕಿಲ್ಲದ ಅವರ ಮನೆಯ ಹಾಲ್‌ನಲ್ಲಿ ಅವರನ್ನು ಕಂಡಾಗ, ವ್ಯಗ್ರತೆಯನ್ನೇ ಬರವಣಿಗೆಯ ಶೈಲಿಯಾಗಿಸಿಕೊಂಡಿದ್ದ ಅವರು, ಅದಕ್ಕೆ ತದ್ವಿರುದ್ಧವೆಂಬಂತೆ ಅಪಾರ ಸಮಾಧಾನಿಯಾಗಿ, ಮೌನಿಯಾಗಿ ಕಂಡಿದ್ದರು. ಏನೋ ನೋವು ಅವರನ್ನು ಬಾಧಿಸುತ್ತಿರುವಂತೆ, ಅದನ್ನು ಹಲ್ಲು ಕಚ್ಚಿ ಸಹಿಸುತ್ತಿರುವವರಂತೆ ನನಗೆ ಭಾಸವಾಗಿತ್ತು. 'ಹೊಸದಾಗಿ ಏನಾದರೂ ಬರೀತಿದೀರಾ' ಅಂತ ಕೇಳಿದಾಗ, 'ಬರ್ಯೋದೆಲ್ಲಾ ಬರ್ದಾಗ್ಯಾತವ್ವ' ಅಂದಿದ್ದರು. ಅವರ ಸ್ವಭಾವಕ್ಕೆ ಹೊಂದದ ಮಾತದು. ಬದುಕಿನಲ್ಲಾಗಲಿ, ಬರಹದಲ್ಲಾಗಲೀ ಹೋರಾಟ ನಿಲ್ಲಿಸಿದವರಲ್ಲ ಅವರು. ಅವರ ಮನಸ್ಥಿತಿಯೇ ಅಂದು ತುಸು ನಿರುತ್ಸಾಹಿಯಾಗಿದ್ದಿರಬೇಕು. ಅಥವಾ ಅನಾರೋಗ್ಯವೇನಾದರೂ ಅವರ ಮನಸ್ಸನ್ನು ಕುಗ್ಗಿಸಿರಬೇಕು. ಇಲ್ಲವಾದಲ್ಲಿ ಅವರೆಂಥ ಜೀವನೋತ್ಸಾಹದ ಮಹಿಳೆ ಎನ್ನುವುದನ್ನು ಹಲವರಿಂದ ನಾನು ಕೇಳಿದ್ದೆ.

ಲೇಖಕರೊಬ್ಬರಿಗೆ, 'ನಾ ಇನ್ನು ಸ್ವಲ್ಪ ಸಣ್ಣಾಕಾಗಿದ್ರ, ನಿನ್ನ ಗೆಳತಿಯಾಗ್ತಿದ್ದೆ ಕಣೋ ಮಾರಾಯ, ಅಷ್ಟು ಛಂದ್ ಇದ್ದಿ' ಎಂದು ತನ್ನ ನಡು ವಯಸ್ಸಿನಲ್ಲಿ ಮುಕ್ತವಾಗಿ ಹೇಳಿದ್ದ ಹೆಣ್ಣು ಇವರು. ಹಾಗನ್ನಿಸಿದ್ದರೂ ಹೇಳದೇ ಇರುವುದೇ ಸಾಮಾಜಿಕ ಸೌಜನ್ಯ ಎಂದು ನಂಬಿರುವ ಪರಿಸರದಲ್ಲಿ, ಅದಕ್ಕೆಲ್ಲಾ ತಲೆಕೆಡಿಸಿಕೊಳ್ಳದೇ ಮುಕ್ತವಾಗಿ ಹೇಳಬಹುದಾದ ಆರೋಗ್ಯಕರ ಮನಸ್ಥಿತಿ ಮತ್ತು ನಿರ್ಭೀತಿಯನ್ನು ಸದಾ ಉಳಿಸಿಕೊಂಡವರು ಗೀತಾ ನಾಗಭೂಷಣ. ಈ ಬಗೆಯ ಮನಸ್ಥಿತಿಗೆ ಎದೆಗಾರಿಕೆ, ಜೀವಪ್ರೀತಿಯ ಜೊತೆಗೇ ಒಂದು ಮಟ್ಟದ ಮುಗ್ಧತೆಯೂ ಬೇಕು. ಅದೂ ಗೀತಾ ಅವರಲ್ಲಿತ್ತು.

ಬರವಣಿಗೆ ನಿಜಕ್ಕೂ ಒಬ್ಬ ಹೆಣ್ಣಿಗೆ ಏನನ್ನೆಲ್ಲ ಕೊಡಬಹುದು ಎನ್ನುವುದಕ್ಕೆ ಗೀತಾ ಒಂದು ಪ್ರಾತಿನಿಧಿಕ ಮಾದರಿ. ಹೆಣ್ಣು ಮೊದಲು ಹೂಡಬೇಕಾದ ಯುದ್ಧ ತನ್ನೊಂದಿಗೆಯೇ ಆಗಿರುತ್ತದೆ. ತನ್ನ ದೇಹ, ತನ್ನ ಮನಸ್ಸು, ತನ್ನ ಆಲೋಚನೆಗಳು, ಬದುಕಿನಲ್ಲಿ ತಾನು ಮಾತ್ರವೇ ತೆಗೆದುಕೊಳ್ಳಬೇಕಾದ ತೀರ್ಮಾನಗಳು... ಈ ಎಲ್ಲವನ್ನೂ ಹೋರಾಟದ ಮೂಲಕವೇ ಪಡೆಯಬೇಕು. ಗೀತಾ ಅಂಥ ಹೋರಾಟವನ್ನು ಬದುಕು ಮತ್ತು ಬರವಣಿಗೆ ಎರಡರಲ್ಲೂ ಮಾಡಿದರು. ಬರವಣಿಗೆಯು ಅವರಿಗೆ ಈ ವಿಷಯದಲ್ಲಿ ಸ್ಪಷ್ಟತೆಯನ್ನು, ನೈತಿಕ ಧೈರ್ಯವನ್ನು ತಂದುಕೊಡುವ ಶಕ್ತಿಯಾಗಿತ್ತು. ಆದ್ದರಿಂದಲೇ ಅವರಿಗೆ ಬರವಣಿಗೆಯ ಬಗ್ಗೆ ಅಂಥ ಮೋಹ ಮತ್ತು ಪ್ರೀತಿ. ಒಳಗಿನ ತಳಮಳಗಳಿಗೆ ಬಿಡುಗಡೆಯಾಗಿ ಮಾತ್ರ ಅವರಿಗೆ ಬರವಣಿಗೆ ಇರಲಿಲ್ಲ, ಅದು ತನ್ನನ್ನು ಕಟ್ಟಿಕೊಳ್ಳುವ ಆಕರವೂ ಆಗಿತ್ತು. ಬರವಣಿಗೆ ಮತ್ತು ತಮ್ಮ ವ್ಯಕ್ತಿತ್ವದ ಜೊತೆಗಿದ್ದ ಅವರ ಅವಿನಾ ಸಂಬಂಧದ ಮೂಲ ಇದು. ಅಕ್ಷರದ ಗಂಧವೇ ಇಲ್ಲದ ಕುಟುಂಬದ ಹಿನ್ನೆಲೆಯ ಇವರಿಗೆ ಅಪ್ಪ ಹಟ ಹಿಡಿದು ಅಕ್ಷರ ಕಲಿಸಿದ್ದು ವರವಾಗಿ, ಪುಣ್ಯವಾಗಿ ಕಾಣುವುದು ಇದೇ ಕಾರಣಕ್ಕೆ. ಬಾಲ್ಯದಲ್ಲಿ, ಬ್ರಾಹ್ಮಣರ ಮನೆಗೆ ಹೋದಾಗ, ಉಳಿದದ್ದನ್ನು, ಹಿತ್ತಲಿಗೆ ಕರೆದು, ಮೇಲಿನಿಂದ ಬಿಸಾಡಿದಾಗ, ಅದನ್ನು ಎಳೆಯ ಕೈಗಳು ಹಿಡಿಯಲಾರದೆ, ಕೆಳಗೆ ಬಿದ್ದಾಗ, ಆ ಬ್ರಾಹ್ಮಣತಿ, 'ಅಯ್ಯ ಖೋಡಿ, ಹಿಡಿಲಿಕ್ಕೂ ಬರಲ್ಲಲೇ ನಿನಗ, ಖೋಡಿ', ಎಂದು ಬಯ್ದಾಗ, ಅವರು ಯಾಕೆ ಅಷ್ಟು